ತಮಸಲ್ಲೋ ಸುಖಪ್ರದಂ' (ಬೆಳಕು ದುಃಖ, ಕತ್ತಲೆಯೇ ಸುಖ) ಎಂದು ಸಾರಿದ ಕವಿ ಅಕ್ಕಿತ್ತಂ.

ಗಾಂಧಿ ಬೇಕೋ, ಕಾರ್ಲ್ ಮಾರ್ಕ್ಸ್ ಬೇಕೋ? ರಕ್ತ ಹರಿಸುವ ಕ್ರಾಂತಿ ಬೇಕೋ? ಮಾನವೀಯತೆಯನ್ನು ಸಾರುವ ಪ್ರೀತಿ ಬೇಕೋ ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಅಕ್ಕಿತ್ತಂ ರಚಿಸಿದ ಕವನ 'ಇರುಪತಾಂ ನೂಟ್ಟಾಂಡಿಂಡೆ ಇತಿಹಾಸಂ'. ಇದು ಕಮ್ಯೂನಿಸ್ಟ್ ವಿರೋಧಿ ಕವನ ಎಂದು ಹಲವರು ವಿಶ್ಲೇಷಿಸಿದ್ದಾರೆ. ಅದಕ್ಕೆ ಕಾರಣವೂ ಇದೆ. ಕಮ್ಯೂನಿಸಂ ಬಗ್ಗೆ ಹಲವಾರು ಭಿನ್ನಾಭಿಪ್ರಾಯಗಳಿದ್ದ ಕಾಲವಾಗಿತ್ತು ಅದು. ಆದರೆ ಮಲಯಾಳಂ ಸಾಹಿತ್ಯದಲ್ಲಿ ಮಾರ್ಕ್ಸಿಯನ್ ಎಲಿಯನೇಷನ್ (**Marxian alienation**) ಎಂಬ ಆಶಯ ಸರಳ ರೀತಿಯಲ್ಲಿ ವ್ಯಾಖ್ಯಾನಗೊಂಡಿದ್ದು ಅಕ್ಕಿತ್ತಂ ಅವರ ಮೂಲಕವೇ.

'ಪಂಡತ್ತೆ ಮೇಲ್ಶಾಂತಿ' ಎಂಬ ಕವಿತೆಯಲ್ಲಿ ಕವಿ ಹೀಗೆ ಹೇಳುತ್ತಾರೆ:

ನನ್ನದಲ್ಲ ಈ ಆನೆಗಳು<br>ನನ್ನದಲ್ಲ ಈ ಮಹಾಕ್ಷೇತ್ರ ಮಕ್ಕಳೇ

ದೇವಸ್ಥಾನದ ಆನೆಯ ಮೇಲೆ ಕುಳಿತಿರುವ ಮೇಲ್ಶಾಂತಿ ಅವರಲ್ಲಿ (ಪ್ರಧಾನ ಅರ್ಚಕರಲ್ಲಿ), ಅಲ್ಲಿರುವ ಪುಟ್ಟ ಮಕ್ಕಳು 'ನಮ್ಮನ್ನೂ ಆನೆ ಮೇಲೆ ಕೂರಿಸಿ' ಎಂದು ಹೇಳುತ್ತಾರೆ. ಆಗ ಮೇಲ್ಶಾಂತಿ, 'ಈ ದೇವಸ್ಥಾನ ನನ್ನದೋ, ಈ ಆನೆಗಳು ನನ್ನವೋ' ಎಂದು ಯೋಚಿಸುತ್ತಾರೆ. 'ಅಲ್ಲ' ಎಂಬ ಉತ್ತರವನ್ನು ಕಂಡುಕೊಳ್ಳುತ್ತಾರೆ.

1926 ಮಾರ್ಚ್ 18ರಂದು ಪಾಲಕ್ಕಾಡ್ ಜಿಲ್ಲೆಯ ಕುಮರನೆಲ್ಲೂರ್ ಎಂಬಲ್ಲಿ ವಾಸುದೇವನ್ ನಂಬೂದಿರಿ ಮತ್ತು ಚೆಕ್ಕೂರ್ ಪಾರ್ವತಿ ಅಂತರ್ಜನಂ ಅನರ ಅವರ ಮಗನಾಗಿ ಅಕ್ಕಿತ್ತಂ ಅಚ್ಯುತನ್ ನಂಬೂದಿರಿ ಜನಿಸಿದರು. ಅವರ ಶಿಕ್ಷಣ ಆರಂಭವಾದುದು ಎಂಟನೇ ತರಗತಿಗೆ ಸೇರುವ ಮೂಲಕ! ಅದಕ್ಕೂ ಮೊದಲು ಉಪನಯನ ಆಗಿ ವೇದಾಭ್ಯಾಸ ಮಾಡುತ್ತಿದ್ದರು. ಜೊತೆಗೆ ಜ್ಯೋತಿಷ್ಯ ಕಲಿತು ಪಿಶಾರಿಕ್ಕಲ್ ದೇವಾಲಯದಲ್ಲಿ ಅರ್ಚಕರಾದರು. ಅಲ್ಲಿದ್ದ ನಂಬೂದಿರಿಗಳು ಅಕ್ಷರ ಶ್ಲೋಕ ಮತ್ತು ಕವಿತೆಗಳನ್ನು ಬಲ್ಲವರಾಗಿದ್ದರು. ಅದು ಅಕ್ಕಿತ್ತಂ ಅವರ ಮೇಲೆ ಪ್ರಭಾವ ಬೀರಿತು. 14ನೇ ವರ್ಷದಲ್ಲಿ ತೃಕ್ಕಂಡಿಯೂರ್ ಕಳತ್ತೂಲ್ ಉಣ್ಣಿಕೃಷ್ಣನ್ ಎಂಬ ಶಿಕ್ಷಕರ ಮೂಲಕ ಗಣಿತ ಮತ್ತು ಇಂಗ್ಲಿಷ್ ಕಲಿತರು. ಕುಮರನಲ್ಲೂರ್ ಶಾಲೆಯಲ್ಲಿ ಪರೀಕ್ಷೆ ಬರೆದು ಎಂಟನೇ ತರಗತಿಗೆ ಸೇರ್ಪಡೆಯಾದರು. ಹೈಸ್ಕೂಲ್ ಶಿಕ್ಷಣದ ನಂತರ ಕೋಯಿಕ್ಕೋಡ್ ಸಾಮೂದಿರಿ ಕಾಲೇಜಿನಲ್ಲಿ ಇಂಟರ್ ಮೀಡಿಯಟ್‌ಗೆ ಸೇರಿದರೂ ಅದನ್ನು ಪೂರ್ಣಗೊಳಿಸಲಿಲ್ಲ.

ಇಡಶ್ಶೇರಿ, ಬಾಲಮಣಿಯಮ್ಮ, ನಾಲಪ್ಪಾಡ್ ನಾರಾಯಣ ಮೆನನ್, ಕುಟ್ಟಿಕೃಷ್ಣ ಮಾರಾರ್ ಮೊದಲಾದವರೊಂದಿಗಿನ ಒಡನಾಟದಿಂದ ಕಾವ್ಯದ ಮೇಲಿನ ಅಕ್ಕಿತಂ ಅವರ ಆಸಕ್ತಿ ಹೆಚ್ಚುತ್ತಾ ಹೋಯಿತು. 1946ರಿಂದ 1949ರವರಗೆ 'ಉಣ್ಣಿನಂಬೂದಿರಿ' ಎಂಬ ಮಾಸಿಕದ ಸಂಪಾದಕರಾಗಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ಇವರು, ವಿ.ಟಿ. ಭಟ್ಟತ್ತಿರಿಪ್ಪಾಡ್, ಇಎಂಎಸ್, ಒಎಂಸಿ ನಾರಾಯಣನ್ ನಂಬೂದಿರಿಪ್ಪಾಡ್ ಮೊದಲಾದವರ ಕಾರ್ಯದರ್ಶಿ ಆಗಿದ್ದವರು. 'ಪೊನ್ನಾನಿ ಕೇಂದ್ರ ಕಲಾ ಸಮಿತಿ' ಕಾರ್ಯದರ್ಶಿಯಾಗಿಯೂ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. 1956ರಲ್ಲಿ ಕೋಯಿಕ್ಕೋಡ್ ಆಕಾಶವಾಣಿ ಕೇಂದ್ರ ಸೇರಿದ ಇವರು, ಆಮೇಲೆ ಆಕಾಶವಾಣಿ ಎಡಿಟರ್ ಆಗಿ 1985ರಲ್ಲಿ ನಿವೃತ್ತಿಹೊಂದಿದರು.